ಸಂಚಾರಿ ಪಶುಚಿಕಿತ್ಸಾ ಬಾಡಿಗೆ ವಾಹನಗಳು

1263(1918); ಶ್ರೀ ಡಾ॥ ಉಮೇಶ್ ಜಿ. ಜಾಧವ್ (ಚಿಂಚೋಳಿ)

ಅ) ರಾಜ್ಯದಲ್ಲಿ ಪಶುಸಂಗೋಪನಾ ಇಲಾಖೆಯಿಂದ ಸಂಚಾರಿ ಪಶುಚಿಕಿತ್ಸೆಗೆ ಬಾಡಿಗೆ ವಾಹನಗಳನ್ನು ಯಾವ ಯಾವ ಜಿಲ್ಲೆಗಳಲ್ಲಿ ನೇಮಿಸಕೊಳ್ಳಲಾಗಿದೆ;

ಆ) ಈ ಬಾಡಿಗೆ ವಾಹನಗಳನ್ನು ನೇಮಿಸಿಕೊಳ್ಳಲು ಇರುವ ಮಾನದಂಡಗಳೇನು; ಹಾಗಿದ್ದಲ್ಲಿ, ಈ ವಾಹನ ಮಾಲೀಕರಿಗೆ ಹಣ ಪಾವತಿ ಮಾಡಲಾಗಿದೆಯೇ (ವಿವರ ನೀಡುವುದು);

ಇ) ಚಿಂಚೋಳಿ ತಾಲ್ಲೂಕಿನಲ್ಲಿ ಸಂಚಾರಿ ಪಶುಚಿಕಿತ್ಸಾ ಬಾಡಿಗೆ ವಾಹನವನ್ನು ನೇಮಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಬಾಡಿಗೆ ವಾಹನ ಮಾಲೀಕರಿಗೆ ಹಣ ಪಾವತಿ ಮಾಡಲಾಗಿದೆಯೇ;

ಈ) ಹಾಗಿಲ್ಲದಿದ್ದಲ್ಲಿ, ಯಾವಾಗ ಪಾವತಿಮಾಡಲಾಗುವುದು (ವಿವರ ನೀಡುವುದು)?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶು ಸಂಗೋಪನೆ ಸಚಿವರು)

ಅ) ರಾಜ್ಯದ 24 ಜಿಲ್ಲೆಗಳ 50 ತಾಲ್ಲೂಕುಗಳಲ್ಲಿ ಸಂಚಾರಿ ಪಶು ಚಿಕಿತ್ಸಾಲಯಗಳನ್ನು ಬಾಡಿಗೆ ವಾಹನದಲ್ಲಿ ಪ್ರಾರಂಭಿಸಲು ಆದೇಶಿಸಲಾಗಿದೆ. ಅದರ ವಿವರಣೆಯನ್ನು ಅನುಬಂಧ–1ರಲ್ಲಿ ನೀಡಿದೆ.

ಆ) ಸಂಚಾರಿ ಪಶು ಚಿಕಿತ್ಸಾಲಯ ವಾಹನಗಳು ಇಲ್ಲದ ತಾಲ್ಲೂಕುಗಳಲ್ಲಿ ಹಿಂದುಳಿದ ತಾಲ್ಲೂಕುಗಳಿಗೆ ಪ್ರಾಮುಖ್ಯತೆ ನೀಡಿ ಆದೇಶಿಸಲಾಗಿದೆ.

ಮಂಜೂರಾತಿ ನೀಡಿರುವ 50 ತಾಲ್ಲೂಕುಗಳಲ್ಲಿ 9 ಜಿಲ್ಲೆಯ 17 ತಾಲ್ಲೂಕುಗಳಿಂದ ಪ್ರಸ್ತಾವನೆ ಸ್ವೀಕರಿಸಿದ್ದು, ಮಂಜೂರಾತಿ ನೀಡಿ ಈವರೆಗೆ ₹ 17.34 ಲಕ್ಷಗಳನ್ನು ವಾಹನ ಮಾಲೀಕರಿಗೆ ಪಾವತಿಸಲು ಸಂಬಂಧಿಸಿದ ಉಪ ನಿರ್ದೇಶಕರುಗಳಿಗೆ ಅನುದಾನ ಬಿಡುಗಡೆಗೊಳಿಸಲಾಗಿದೆ.

ಇ) ಬಂದಿದೆ.

ಬಾಡಿಗೆ ವಾಹನ ಮಾಲೀಕರಿಗೆ ಹಣ ಪಾವತಿಸಲು ಕ್ರಮವಹಿಸಲಾಗುತ್ತಿದೆ.

ಈ) ಶೀಘ್ರದಲ್ಲಿ ಪಾವತಿಸಲು ಕ್ರಮವಹಿಸಲಾಗುವುದು.

ಅನುಬಂಧ–1

ಶ್ರೀ ಡಾ॥ ಉಮೇಶ್ ಜಿ. ಜಾಧವ್ (ಚಿಂಚೋಳಿ) ವಿಧಾನ ಸಭಾ ಕ್ಷೇತ್ರ, ಅವರ ಚುಕ್ಕೆರಹಿತ ಪ್ರಶ್ನೆ ಸಂ. 1918ಕ್ಕೆ ವಿವರಗಳು

ಕ್ರಮ ಸಂಖ್ಯೆ	ಜಿಲ್ಲೆ	ಕ್ರಮ ಸಂಖ್ಯೆ	ಸ್ಥಳದ ಹೆಸರು
1	2	3	4
1.	ಬೆಂಗಳೂರು ನಗರ	1	ಬೆಂಗಳೂರು ಪೂರ್ವ ಕೃಷ್ಣರಾಜಪುರ)
		2	ಆನೇಕಲ್
2.	ಬೆಂಗಳೂರು ಗ್ರಾಮಾಂತರ	3	ದೊಡ್ಡಬಳ್ಳಾಪುರ
		4	ಹೊಸಕೋಟೆ
3.	ಶಿವಮೊಗ್ಗ	5	ಶಿಕಾರಿಪುರ
4.	ತುಮಕೂರು	6	ಶಿರಾ
		7	ಕುಣಿಗಲ್
5.	ದಾವಣಗೆರೆ	8	ಚೆನ್ನಗಿರಿ
6.	ಮೈಸೂರು	9	ಮೈಸೂರು
		10	ಟಿ.ನರಸೀಪುರ
7.	ಹಾಸನ	11	ಅರಕಲಗೂಡು
8.	ದಕ್ಷಿಣ ಕನ್ನಡ	12	ಮಂಗಳೂರು
		13	ಬಂಟ್ವಾಳ
9.	ಮಂಡ್ಯ	14	ಮಂಡ್ಯ
		15	ಶ್ರೀರಂಗಪಟ್ಟಣ
		16	ನಾಗಮಂಗಲ
		17	ಕೆ.ಆರ್.ಪೇಟೆ
		18	ಪಾಂಡವಪುರ

10.	ಬೆಳಗಾವಿ	19	ಚಿಕ್ಕೋಡಿ
		20	ಗೋಕಾಕ್
		21	ಬೈಲಹೊಂಗಲ
		22	ರಾಯಭಾಗ್
		23	ಅಥಣಿ
11.	ಉತ್ತರ ಕನ್ನಡ	24	ಕಾರವಾರ
		25	ಕುಮಟ
12.	ಹಾವೇರಿ	26	ಹಾವೇರಿ
		27	ಬ್ಯಾಡಗಿ
		28	ರಾಣೆಬೆನ್ನೂರು
		29	ಹಾನಗಲ್
		30	ಸವಣೂರು
13.	ಬೀದರ್	31	ಬಾಲ್ಕಿ
		32	ಬಸವಕಲ್ಯಾಣ
14.	ಗುಲ್ಬರ್ಗ	33	ಆಳಂದ್
15.	ಗದಗ್	35	ನರಗುಂದ
16.	ಕೋಲಾರ		
		36	ಬಂಗಾರಪೇಟೆ
17.	ಧಾರವಾಡ	37	ಹುಬ್ಬಳ್ಳಿ
		38	ನವಲಗುಂದ
18.	ಕೊಡಗು	39	ಕುಂದಗೋಳ
19.	ಚಿಕ್ಕಮಗಳೂರು		
		40	ಸೋಮವಾರಪೇಟೆ
		41	ನರಸಿಂಹರಾಜಪುರ
20.	ಚಾಮರಾಜನಗರ	42	ಗುಂಡ್ಲುಪೇಟೆ

		43	ಕೊಳ್ಳೇಗಾಲ
		44	ಯಳಂದೂರು
21.	ಚಿಕ್ಕಬಳ್ಳಾಪುರ	45	ಗೌರಿಬಿದನೂರು
		46	ಬಾಗೇಪಲ್ಲಿ
22.	ಯಾದಗಿರಿ	47	ಯಾದಗಿರಿ
23.	ಚಿತ್ರದುರ್ಗ	48	ಚಳ್ಳಕೆರೆ
24.	ಬಿಜಾಪುರ	49	ಮುದ್ದೇಬಿಹಾಳ
		50	ಇಂಡಿ

ಕೈಗಾರಿಕಾ ನಿವೇಶನಗಳು

1264(1919); ಶ್ರೀ ಡಾ॥ ಉಮೇಶ್ ಜಿ. ಜಾಧವ್ (ಚಿಂಚೋಳಿ)

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಗುಲ್ಬರ್ಗಾ ಜಿಲ್ಲೆಯಲ್ಲಿ ನಿರ್ಮಾಣ ಮಾಡಿರುವ ಒಟ್ಟು ಕೈಗಾರಿಕಾ ನಿವೇಶನಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮತ್ತು ತಾಲ್ಲೂಕುವಾರು 3 ವರ್ಷದ ಮಾಹಿತಿ ಒದಗಿಸುವುದು);

ಆ) ಈ ನಿವೇಶನಗಳಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಮೀಸಲಿರಿಸುವ ನಿವೇಶನಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮತ್ತು ತಾಲ್ಲೂಕುವಾರು 3 ವರ್ಷದ ಮಾಹಿತಿ ಒದಗಿಸುವುದು);

ಇ) ಈ ಮೀಸಲು ನಿವೇಶನಗಳನ್ನು ಆಯಾ ಜನಾಂಗದವರಿಗೆ ಹಂಚಲಾಗಿದೆಯೇ (ವಿವರ ನೀಡುವುದು)?